ಕುರಿಯನ್‌ರವರಿಗೆ ಬಹಳ ಒಳ್ಳೆಯ ಅಭಿಪ್ರಾಯ ಇದೆ. ಒಳ್ಳೆಯ ಮನಸ್ಸು ಇದೆ, ಹೆಚ್ಚಿನ ಹಣ ಅವರಲ್ಲಿದೆ. ನಮಗೆ ಇನ್ನೂ ಫೀಡ್ಸ್ ಬೇಕಾಗಿದೆ. ಬರಗಾಲ ಪರಿಸ್ಥಿತಿಯಲ್ಲಿ ಹೈನುಗಾರಿಕೆ ಬೆಳೆಯಬೇಕಾದರೆ ಫೀಡ್ಸ್ ಬೇಕಾಗುತ್ತದೆ. ದಯವಿಟ್ಟು ತಾವು ನಮ್ಮ ರಾಜ್ಯ ಸರ್ಕಾರದ ವತಿಯಿಂದ ಹೋಗಿ ಅವರನ್ನು ಭೇಟಿ ಮಾಡಿ. ಯಾವ ರೀತಿಯಲ್ಲಿ ಫೈನಾನ್ಸ್ ಮಾಡಿಕೊಂಡಬೇಕೆಂಬ ವಿಚಾರದಲ್ಲಿ ಅನಂತರ ಲೆಕ್ಕಾಚಾರ ಹಾಕಿಕೊಡಿ. ಪ್ರಿನ್ಸಿಪಲ್ ಅಗ್ರಿಮೆಂಟ್ ಮಾಡಿಕೊಂಡು ಬರುವುದಕ್ಕೆ ತಾವು ಆನಂದ್‌ಗೆ ಹೋಗಿಬರಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ. ನಾನು ಆನಂದ್‌ಗೆ ಭೇಟಿಕೊಟ್ಟು ಮಾನ್ಯ ಕುರಿಯನ್‌ರವರ ಜೊತ ಚರ್ಚೆಯನ್ನೂ ಕೂಡ ಮಾಡಿದ್ದೇನೆ. ಅವರ ಆಪರೇಷನ್ ಫ್ಲಡ್ ತ್ರೀ ಅಂತಿಮವಾದರೂ ಕೂಡ 2000 ವರ್ಷದ ಅಂತ್ಯದವರೆಗೂ ಅದನ್ನು ವಿಸ್ತರಣೆ ಮಾಡಬೇಕು. ಆಪರೇಷನ್ ಫ್ಲಡ್ ಫೋರ್‌ನ್ನು ಇಂಟ್ರಡ್ಯೂಸ್ ಮಾಡಬೇಕು. ನಮ್ಮಲ್ಲಿರತಕ್ಕ ಸಿಕ್ ಯೂನಿಟ್ಸ್‌ನ್ನು ರಿವೈವ್‌ಲ್ ಮಾಡಬೇಕು, ರೀ ಷೆಡ್ಯೂಲಿಂಗ್ ಮಾಡಬೇಕು, ಇನ್ನೂ ಮುಂತಾದ ಹಲವಾರು ವಿಚಾರಗಳನ್ನು ಅವರೊಡನೆ ಪ್ರಸ್ತಾಪ ಮಾಡಿ ಬಂದಿದ್ದೇವೆ ಮಾನ್ಯ ನಾಗೇಗೌಡರು ತಿಳಿಸಿದಂತೆ ಸುಮಾರು 1000 ಕೋಟಿ ರೂ.ಗಿಂತ ಹೆಚ್ಚು ಲಾಭದಲ್ಲಿ ಎನ್.ಡಿ.ಡಿ.ಬಿ. ನಡೆಯುತ್ತಿದೆ. ಮುಂದೆ ಅವರು ಆಪರೇಷನ್ ಫ್ಲಡ್ ಫೋರ್‌ನ್ನು ತೆಗೆದುಕೊಂಡಾಗ ನಮ್ಮಲ್ಲಿ 70-30 ಬೇಸಿ ಸಬ್ಸಿಡಿ ತೆಗೆದುಕೊಂಡು ಮುಂದೆ ಏನು ಮಾಡಬೇಕೆಂಬ ಬಗ್ಗೆ ಅವರ ಜೊತ ಚರ್ಚೆ ಮಾಡೋಣ. ಮಾನ್ಯ ಸದಸ್ಯರ ಮನಸ್ಸಿನ ಇಂಗಿತ ನನಗೆ ಗೊತ್ತಿದೆ. ಅವರು ತಮ್ಮ ಕಾಲದಲ್ಲಿ ಬಹಳ ಉತ್ತಮವಾಗಿ ಈ ಇಲಾಖೆಯನ್ನು ಅಭಿವೃದ್ಧಿ ಮಾಡುವ ದಿಸೆಯಲ್ಲಿ ಕೆಲಸ ಮಾಡಿದ್ದಾರೆ. ಅವರನ್ನೂ ನನ್ನ ಜೊತೆಗೆ ತೆಗೆದುಕೊಂಡು ಈ ಕಾರ್ಯಕ್ರಮವನ್ನು ಮಾಡುತ್ತೇನೆಂದು ಹೇಳಬಯಸುತ್ತೇನೆ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ : 11ನೇ ಸೆಪ್ಟಂಬರ್ 1995ರ 19ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 51ಪ್ರಶ್ನೆಗಳ ಪೈಕಿ 45ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಹುಬ್ಬಳ್ಳಿ ನಗರ ಪ್ರದೇಶದಲ್ಲಿ ನೀರಾವರಿ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ

2353 - ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರ ಪ್ರದೇಶದಲ್ಲಿ ನೀರಾವರಿ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆಯೇ ಹಾಗಿದ್ದಲ್ಲಿ ಎಷ್ಟು, ಇನ್ನು ಬೇಡಿಕೆ ಇದೆಯೇ.

ಆ) ಕುಡಿಯುವ ನೀರಿನ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆಯೇ, ಸಂಪರ್ಕ ಇಲ್ಲದೇ ಇನ್ನು ಎಷ್ಟು ಕೊಳವೆ ಬಾವಿಗಳಿವೆ.

ಇ) ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮಗಳೇನು.

ಈ) ಈ ಎರಡು ಯೋಜನೆಗಳ ಬಗ್ಗೆ ಸರ್ಕಾರ ಇದುವರೆಗೆ ಮಾಡಿದ ವೆಚ್ಚ ಎಷ್ಟು? (ವಿವರವನ್ನೊದಗಿಸುವುದು).

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು, ಆಗಸ್ಟ್ 95ರ ಅಂತ್ಯದವರೆಗೆ ಒಟ್ಟು 417ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ ಬೇಡಿಕೆ ಇದ್ದು, 20 ಅರ್ಜಿಗಳು ವಿವಿಧ ಹಂತಗಳಲ್ಲಿ ಬಾಕಿ ಉಳಿದಿವೆ.

ಆ) ಹೌದು, ಆಗಸ್ಟ್ 95ರ ಅಂತ್ಯದವರೆಗೆ ಒಟ್ಟು 44 ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಯಾವುದೇ ಅರ್ಜಿಯು ವಿದ್ಯುತ್ ಸಂಪರ್ಕಕ್ಕಾಗಿ ಪ್ರಸ್ತುತ ಬಾಕಿ ಉಳಿದಿಲ್ಲ.

ಇ) ಬಾಕಿ ಇರುವ ನೀರಾವರಿ ಪಂಪುಸೆಟ್ಟುಗಳ ಅರ್ಜಿಗಳಿಗೆ ಆರ್ಥಿಕ ಮತ್ತು ತಾಂತ್ರಿಕ ಸಾಧ್ಯತೆಗಳನ್ನು ಪರಿಶೀಲಿಸಿ ಆದ್ಯತೆ ಮತ್ತು ಹಿರಿತನದ ಪ್ರಕಾರ ವಿದ್ಯುತ್ ಸಂಪರ್ಕ ಒದಗಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ.

ಈ) ಈ ಎರಡು ಯೋಜನೆಗಳ ಬಗ್ಗೆ ಆಗಸ್ಟ್ 95ರ ಅಂತ್ಯದವರೆಗೆ ಒಟ್ಟು 69.5 ಲಕ್ಷ ರೂ. ಗಳನ್ನು ಖರ್ಚು ಮಾಡಲಾಗಿದೆ.

ವಿವರಗಳು ಕೆಳಕಂಡಂತಿದೆ.

1)	ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಒದಗಿಸುವ ಬಗ್ಗೆ	65 ಲಕ್ಷ ರೂ.
2)	ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಒದಗಿಸುವ ಬಗ್ಗೆ	4.5 ಲಕ್ಷ್ಷ ರೂ.
	ಒಟ್ಟು	69.5 ಲಕ್ಷ ರೂ.

ಹುಬ್ಬಳ್ಳಿ ನಗರದಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

2384 - ಶ್ರೀ ಅಶೋಕ್ ಕಾಟ್ವೆ (ಹುಬ್ಬಳ್ಳಿ ನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ ನಗರದಲ್ಲಿ ವಿದ್ಯುತ್ ಪೂರೈಕೆಯ ಪ್ರತಿನಿತ್ಯ ವ್ಯತ್ಯಯ ಉಂಟಾಗಿ ಅಲ್ಲಿಯ ಕೈಗಾರಿಕೆ ಹಾಗೂ ವಾಣಿಜ್ಯ ಚಟುವಟಿಕೆಗಳಿಗೆ ಭಾರಿ ಅನಾನುಕೂಲ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ*

ಆ) *ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ಕ್ರಮಗಳನ್ನು ಕೈಗೊಂಡಿದೆ.*

ಇ) *ವಿದ್ಯುತ್ ಸರಬರಾಜು ಸುಧಾರಿಸಲು ಸರ್ಕಾರವು ಹುಬ್ಬಳ್ಳಿ ನಗರಕ್ಕೆ ಆಗತ್ಯ ವಿರುವ ಎಷ್ಟು ಕೆ.ವಿ. ವಿದ್ಯುತ್ ಸರಬರಾಜು ಮಾಡಲು ವ್ಯವಸ್ಥೆ ಮಾಡಿದೆ ಹಾಗೂ ಅದರ ವಿವರ ನೀಡುವುದು?*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು.

ಆ) ಹುಬ್ಬಳ್ಳಿ ನಗರದಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಅ) ಹುಬ್ಬಳ್ಳಿ ಸಮೀಪದ ನರೇಂದ್ರದಲ್ಲಿ ಏಷಿಯನ್ ಅಭಿವೃದ್ಧಿ ಬ್ಯಾಂಕಿನ ಸಾಲ ಸೌಲಭ್ಯದೊಡನೆ 220:110 ಕೆ.ವಿ.ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ನಿರ್ಮಾಣ ಮಾಡಲಾಗುತ್ತಿದೆ. ನಿರ್ಮಾಣ ಕಾರ್ಯವನ್ನು ಡಿಸೆಂಬರ್ 96ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಿದೆ.